# ಕರ್ನಾಟಕ ಸರ್ಕಾರ
## ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ03 ಇಸಿಎಸ್ (3) 2015

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ 10-02-2017

## ಜ್ಞಾಪನ

ವಿಷಯ: ಪಾಲಿಟೆಕ್ನಿಕ್‌ಗಳಲ್ಲಿ ನಡೆಸುವ ಕೋರ್ಸುಗಳಿಗೆ 2016-17ನೇ ಸಾಲಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ.ಇಡಿ 430 ಟಿಪಿಇ 97, ಬೆಂಗಳೂರು ದಿನಾಂಕ: 04-12-98.

2. ಸರ್ಕಾರಿ ಆದೇಶ ಸಂಖ್ಯೆ:ED 39 egov 2015 ದಿನಾಂ:31-03-2016

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ಉಲ್ಲೇಖದಲ್ಲಿ ತಿಳಿಸಿರುವ ಸರ್ಕಾರಿ ಆದೇಶಗಳನ್ವಯ 2016-17 ರ ಸಾಲಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯಬೇಕಾಗಿರುತ್ತದೆ. ಪಾಲಿಟೆಕ್ನಿಕ್‌ಗಳು ಸಂಯೋಜನೆ ಪಡೆಯಲು ಸಂಯೋಜನೆ ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಲೆಕ್ಕ ಶೀರ್ಷಿಕೆ 0202-02-101-0-06 "ಅಫಿಲಿಯೇಷನ್ ಫೀ ಫಾರ್ ಟೆಕ್ನಿಕಲ್ ಎಜುಕೇಷನ್"ಯಡಿ <u>ದಿನಾಂಕ: 01-03-2017</u> ರೊಳಗಾಗಿ ಸರ್ಕಾರಿ ಖಜಾನೆಗೆ ಜಮಾ ಮಾಡುವುದು. ಈ ಸಂಬಂಧ ಸರ್ಕಾರಿ ಖಜಾನೆಗೆ ಜಮಾ ಮಾಡಬೇಕಾದ ಶುಲ್ಕದ ವಿವರ ಈ ಕೆಳಕಂಡಂತಿದೆ.

1) ಈಗಾಗಲೇ ನಡೆಸುತ್ತಿರುವ ಪ್ರತಿ ಕೋರ್ಸುಗಳಿಗೆ — ರೂ. 2000-00
2) ಈಗಾಗಲೆ ನಡೆಸುತ್ತಿದ್ದು 2015-16 ನೇ ಸಾಲಿನಲ್ಲಿ ಪ್ರವೇಶ ಸಂಖ್ಯೆ ಹೆಚ್ಚಿಸಿರುವ ಪ್ರತಿಕೋರ್ಸಿಗೆ — ರೂ. 2000-00
3) 2015-16 ನೇ ಸಾಲಿನಲ್ಲಿಪ್ರಾರಂಭವಾಗಿರುವ ಪ್ರತಿ ಕೋರ್ಸುಗಳಿಗೆ — ರೂ. 10,000-00
4) 2015-16ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ಪಾಲಿಟೆಕ್ನಿಕ್‌ಗಳಿಗೆ ಮತ್ತು ಸದರಿ ಹೊಸ ಪಾಲಿಟೆಕ್ನಿಕ್‌ಗಳಲ್ಲಿ ಪ್ರಾರಂಭ ಮಾಡಿರುವ ಪ್ರತಿ ಹೊಸ ಕೋರ್ಸ್‌ಗೆ ಕ್ರಮವಾಗಿ — ರೂ.20,000-00 ಮತ್ತು ರೂ.10,000-00

2016-17 ನೇ ಸಾಲಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯಲು ಆನ್‌ಲೈನ್ ಅರ್ಜಿ ನಮೂನೆಯ ತಂತ್ರಾಂಶವನ್ನು ಉನ್ನತ ಶಿಕ್ಷಣ ಇಲಾಖೆಯು ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರದ (NIC) ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ್ದು, ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡುವುದು.

ಪ್ರತಿ ವರ್ಷದಂತೆ ತಮ್ಮ ಸಂಸ್ಥೆಯಲ್ಲಿ 2013-14, 2014-15 ಮತ್ತು 2015-16 ರ ಶೈಕ್ಷಣಿಕ ವರ್ಷದಿಂದ ಯಾವುದಾದರೂ ಹೊಸ ಕೋರ್ಸ್‌ಗಳು ಪ್ರಾರಂಭವಾಗಿದ್ದು ಎಲ್ಲಾ ಸೆಮಿಸ್ಟರ್‌ಗಳಿಗೆ ತರಗತಿ ಹಾಗೂ ಹೊಸ ಪಠ್ಯಕ್ರಮಗಳನುಸಾರ ಪರೀಕ್ಷೆ ನಡೆಸಲು ಪ್ರಯೋಗಾಲಯಗಳು ಸೂಕ್ತವಾಗಿವೆಯೇ ಎಂಬುದರ ಬಗ್ಗೆ ಆನ್‌ಲೈನ್ ಅರ್ಜಿಯಲ್ಲಿ ವಿವರಗಳನ್ನು ಭರ್ತಿ ಮಾಡುವುದು ಮತ್ತು ಸಂಯೋಜನೆ ಶುಲ್ಕವನ್ನು ಸರ್ಕಾರಿ ಖಜಾನೆಗೆ ಜಮಾ ಮಾಡಿದ ಮೂಲ ರಸೀದಿಯನ್ನು ತಮ್ಮ ಸಂಸ್ಥೆಯಲ್ಲಿಯೇ ಇಡುವುದು.

ಯಾವುದೇ ಕಾರಣಕ್ಕೂ ಸಂಯೋಜನಾ ಶುಲ್ಕವನ್ನು ಸರ್ಕಾರಿ ಖಜಾನೆಗೆ ಜಮಾ ಮಾಡುವ ದಿನಾಂಕವನ್ನು ಮುಂದೂಡಲಾಗುವುದಿಲ್ಲ ಹಾಗೂ ಆನ್‌ಲೈನ್‌ನಲ್ಲಿ ತಡವಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಇದರಿಂದಾಗಿ ಉಂಟಾಗುವ ತೊಂದರೆಗಳಿಗೆ ಪ್ರಾಚಾರ್ಯರುಗಳೇ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಈ ವಿಷಯದಲ್ಲಿ ವಿಶೇಷ ಗಮನ ಹರಿಸಿ ಮೇಲೆ ತಿಳಿಸಿರುವಂತೆ ಕ್ರಮ ಜರುಗಿಸಲು ಆದೇಶಿಸಲಾಗಿದೆ.

ನಿರ್ದೇಶಕರು

ಇವರಿಗೆ,
ಎಲ್ಲಾ [redacted] ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ.

ಪ್ರತಿ:
1)ಸಹ ನಿರ್ದೇಶಕರು (ಪರೀಕ್ಷೆ)
2)ಸಹ ನಿರ್ದೇಶಕರು (ಎ ಟಿಎಸ್)
3)ಉಪ ನಿರ್ದೇಶಕರು(ಪರೀಕ್ಷೆ)
4)ಸಹಾಯಕ ನಿರ್ದೇಶಕರು(ಪರೀಕ್ಷೆ)(1) ಮತ್ತು (2))
5)ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ
6)ಪರೀಕ್ಷೆ ಇ.ಸಿ.ಎಸ್ (2) ವಿಭಾಗಕ್ಕೆ.